

No.MAG(3)/NPP/98/2023-2024

No.MAG(3)/NPP/99/2023-2024



ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು-೧೨೦

ಸಂಪುಟ: ೧೩ ಸಂಚಿಕೆ: ೮ | Volume: 13 Issue: 8

ನವೆಂಬರ್ ೨೦೨೫ | November 2025

ಪುಟಗಳು-೮ | Pages-8

ವಾರ್ಷಿಕ ಚಂದಾ ರೂ.೨೦/- | Annual Subscription Rs.20/-

ಶ್ರೀ ವಿಶ್ವಾವಸು ಸಂವತ್ಸರ ಕಾರ್ತೀಕ-ಮಾರ್ಗಶಿರ ಮಾಸ

## ಸಂನುಡಿ

ಪ್ರಿಯ ಓದುಗರೇ,

ಈಗ ನಿಮ್ಮ ನೆಚ್ಚಿನ 'ಹೊಂಗನಸು' WhatsApp ಜಾಲದ ಮೂಲಕ ಇ=ಮಾಸಪತ್ರಿಕೆಯಾಗಿ ತಮ್ಮೆಲ್ಲರನ್ನು ತಲುಪುತ್ತಿದೆ. ಇಂದು ಇದು ಅನಿವಾರ್ಯ. ಬಹಳಷ್ಟು ಓದುಗರು ಇದನ್ನು ನಗುಮುಖದಿಂದ ಸ್ವೀಕರಿಸಿ, ಹೀಗೇ ಮುಂದುವರೆಯಲಿ ಎಂದಿದ್ದಾರೆ. ಮುಂದಿನ ದಿನಗಳಲ್ಲಿ ಇದೇ ಶಾಶ್ವತ ಆಗಬಹುದು. ಅನೇಕ ಹೆಸರಾಂತ ಪತ್ರಿಕೆಗಳೂ ಈಗ ಇ–ಪತ್ರಿಕೆಗಳೇ ಆಗಿಬಿಟ್ಟಿವೆ.

ಆದಾಗ್ಯೂ, ಕೈಯಲ್ಲಿ ಪತ್ರಿಕೆ ಹಿಡಿದು ಓದುವುದು ಒಂದು ಭಾಗ್ಯ; ಅದರಲ್ಲಿರುವ ಸಂತೋಷವೇ ಬೇರೆ ಎಂಬ ಅಭಿಪ್ರಾಯ ಇರುವ ಕೆಲವರಾದರೂ ಇರುವುದುಂಟು. ಅವರುಗಳ ಈ ಅಭಿಲಾಷೆ ಸಹಜ ಮತ್ತು ಸ್ವೀಕಾರಾರ್ಹ. ಅವರ ಆಶೋತ್ತರಗಳಿಗೆ ಸ್ಪಂದಿಸಿ ಬಿ.ಎಂ.ಶ್ರೀ. ಪ್ರತಿಷ್ಠಾನ ಹಲವು ತಿಂಗಳುಗಳಿಂದ ಕೆಲವು ಪ್ರತಿಗಳನ್ನು ಮುದ್ರಿಸಿ ದುಬಾರಿ ಅಂಚೆ ವೆಚ್ಚವನ್ನೂ ಗಮನಿಸದೆ, ಭೌತಿಕ ಪ್ರತಿಗಳನ್ನು ಕಳುಹಿಸುತ್ತಿದೆ. ಹೊಂಗನಸು ಪ್ರತಿಗಳ ಮುದ್ರಣ ಸಂಖ್ಯೆ ಕಡಿಮೆಯಾದಂತೆ ವೆಚ್ಚವೂ ಅಧಿಕವಾಗುತ್ತದೆ. ಇದು ಸಂಸ್ಥೆಗೆ ಸ್ವಲ್ಪ ಹಣಕಾಸಿನ ಭಾರವಾಗುವ ವಿಷಯವೂ ಹೌದು.

ಆದ್ದರಿಂದ, ಇನ್ನೂ ಮುಂದೆಯೂ ಹೊಂಗನಸು ಪತ್ರಿಕೆಯನ್ನು ಇ–ಪತ್ರಿಕೆಯಾಗಿ ಕಳಿಸುತ್ತಾ, ಭೌತಿಕ ಪತ್ರಿಕೆ ಬಯಸುವವರಿಗೆ ಅವರು ಹೆಚ್ಚಿನ ಅಂಚೆ ಮತ್ತು ಮುದ್ರಣ ವೆಚ್ಚ ಭರಿಸಲು ಮುಂದಾದಲ್ಲಿ ಅಂಚೆ ಮೂಲಕ ಕಳುಹಿಸಲಾಗುವುದು. ಭೌತಿಕ ಪತ್ರಿಕೆ ಬೇಕೆನ್ನುವವರು ದಯವಿಟ್ಟು ತಮ್ಮ ಅನಿಸಿಕೆಯನ್ನು ಸಂಸ್ಥೆಯ ಕಚೇರಿಗೆ ಲಿಖಿತ ರೂಪದಲ್ಲಿ ತಿಳಿಸಿದರೆ, ಇಂತಹ ಅಭಿಲಾಷೆಯವರ ಸಂಖ್ಯೆಯ ಆಧಾರದ ಮೇಲೆ ಲೆಕ್ಕ ಮಾಡಿ ಹೆಚ್ಚಿನ ಹಣ ಪಾವತಿ ಮಾಡಿದವರಿಗೆ ಅಂಚೆಯ ಮೂಲಕ ಕಳುಹಿಸಲಾಗುವುದು.

ಇಂತಹ ಅಭಿಲಾಷೆ ಉಳ್ಳವರು ಇದೇ ದಿನಾಂಕ ೩೦ ನವೆಂಬರ್ ೨೦೨೫ ರ ಒಳಗೆ ಪ್ರತಿಷ್ಠಾನದ ಕಚೇರಿಗೆ ಲಿಖಿತ ರೂಪದಲ್ಲಿ ಸಮಕ್ಷಮ ಬಂದು ಅಥವಾ ಅಂಚೆ ಮೂಲಕ ತಿಳಿಸಿದರೆ ಮುಂದಿನ ಸೂಕ್ತ ಕ್ರಮ ಜರುಗಿಸಲು ಅನುಕೂಲವಾಗುವುದು.

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಅಕ್ಟೋಬರ್ ೨೦೨೫ ತಿಂಗಳಿನಲ್ಲಿ ನಡೆದ ಕಾರ್ಯಕ್ರಮಗಳ ಪಕ್ಷಿನೋಟ

### ಶ್ರೀ ಎಂ.ಎ. ರಾಮಾನುಜ ಅಯ್ಯಂಗಾರ್ ದತ್ತಿ ಕಾರ್ಯಕ್ರಮ
### ದಿನಾಂಕ ೧೧/೧೦/೨೦೨೫ರ ಸಂಜೆ ಎಂ.ವಿ.ಸೀ. ಸಭಾಂಗಣದಲ್ಲಿ ನಡೆಯಿತು

'ನಾ. ಕಸ್ತೂರಿ ಅವರ ಸಾಹಿತ್ಯ' ಎಂಬ ವಿಷಯದ ಮೇಲೆ, ಸರಕಾರಿ ಪದವಿಪೂರ್ವ ಕಾಲೇಜ್, ಚಿಕ್ಕಮಗಳೂರಿನ ಕನ್ನಡ ಉಪನ್ಯಾಸಕರಾದ ಡಾ ಎಚ್.ಎಸ್. ಸತ್ಯನಾರಾಯಣ ಅವರು ಮಾತನಾಡಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ ನಾದೂರು ಅವರು ಅಧ್ಯಕ್ಷತೆ ವಹಿಸಿದ್ದರು.




ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷರು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕರು**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕಾರದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರಿಂದ ದತ್ತಿಯ ಪರಿಚಯ ಮತ್ತು ಸ್ವಾಗತ ಭಾಷಣದ ನಂತರ ಉಪನ್ಯಾಸ ಪ್ರಾರಂಭವಾಯಿತು.

ಉಪನ್ಯಾಸಕ ಡಾ. ಎಚ್.ಎಸ್. ಸತ್ಯನಾರಾಯಣ ಅವರು ಮಾತನಾಡುತ್ತಾ, ನಾ. ಕಸ್ತೂರಿ ಅವರ ಕಾಲದಲ್ಲಿ, ಸಾಹಿತಿಗಳಲ್ಲಿ ಹಿರಿಯ, ಕಿರಿಯ, ಮೇಲು ಕೀಳು ಎಂಬ ಭೇದಭಾವ ಇರಲಿಲ್ಲ. ನಾ. ಕಸ್ತೂರಿ ಎಂದರೆ ಕನ್ನಡ, ಕನ್ನಡ ಎಂದರೆ ಕಸ್ತೂರಿ ಎನ್ನುವಷ್ಟರಮಟ್ಟಿಗೆ ಅವರ ಸಾಹಿತ್ಯ ಮೌಲ್ಯಯುತವಾಗಿತ್ತು. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಅವರು ಕೃತಿಗಳನ್ನು ರಚಿಸಿದ್ದರು. ಒಂದೊಂದೂ ನೆನಪಿನಲ್ಲಿ ಅಚ್ಚಳಿಯವಂತಹ ಕೃತಿಗಳು. ಅದರಲ್ಲೂ ಅವರ ಮಕ್ಕಳ ಸಾಹಿತ್ಯವಂತೂ ಓದುಗರನ್ನು ಮತ್ತೆ ಮತ್ತೆ ಓದುವಂತೆ, ಹಾಗೇ ಹಾಡಿ ಕುಣಿವಂತೆ ಮಾಡುತ್ತಿದ್ದವು.

ಆಂಗ್ಲ ಭಾಷಾ ಸಾಹಿತ್ಯವನ್ನು ಅವರು ಅನುವಾದಿಸಿದ್ದರೂ, ಅವು ಮೂಲ ಕೃತಿಗಿಂತ ಅದ್ಭುತವಾಗಿದ್ದವು. ಮೂಲದ ಸೊಗಡೇ ಬೇರೆ, ಇವರ ರಚನೆಯ ದೇಶೀ ಸೊಗಡೇ ಬೇರೆ ಇರುವಂತಹುದು. ನಾ.ಕಸ್ತೂರಿಯವರು ಕೆಲವು ನಾಟಕಗಳಲ್ಲಿ ಪಾತ್ರಗಳ ಸೃಷ್ಟಿ ಮತ್ತು ಅದನ್ನು ಪ್ರಕಟಿಸುವ ರೀತಿ, ಓದುಗನ ಮತ್ತು ವೀಕ್ಷಕನ ಮನಸ್ಸನ್ನು ಹಗುರಗೊಳಿಸುವ ತಿಳಿ ಲೇಪನ. ಇದು ನನ್ನನ್ನು ಬಹಳಷ್ಟು ಆಕರ್ಷಿಸಿದ ಸಂಗತಿ ಎಂದರು.

ಎ.ಆರ್. ಕೃಷ್ಣಶಾಸ್ತ್ರಿಗಳು "ನಾ. ಕಸ್ತೂರಿ ಅಲ್ಲ. ನಾಟಕದ ಕಸ್ತೂರಿ" ಎಂದೇ ಕರೆಯುತ್ತಿದ್ದರು. ಏಕೆಂದರೆ ನಿಂತ ನಿಂತಲ್ಲೆ ಅಲ್ಲಿನ ಸನ್ನಿವೇಶಗಳನ್ನು ಗಮನಿಸಿ ನಾಟಕ ಸೃಷ್ಟಿಸಿ ಬರೆಯುವ ಕಲೆ ನಾ. ಕಸ್ತೂರಿಯವರಿಗೆ ಕರಗತವಾಗಿತ್ತು. ಅವರ ಹಾಸ್ಯದಲ್ಲಿ ನಯದಲ್ಲೇ ನುಣುಪು ಇರುತ್ತಿತ್ತು. ಯಾವುದೇ ಕ್ಲಿಷ್ಟ ವಾತಾವರಣವಿದ್ದರೂ, ಅದನ್ನು ಹಾಸ್ಯಮಯವಾಗಿ ಪರಿವರ್ತಿಸಿ ತಿಳಿಗೊಳಿಸುವ ಕ್ಷಮತೆ ಕಸ್ತೂರಿಯವರಲ್ಲಿ ಇತ್ತು ಎನ್ನುತ್ತಾ ಅನೇಕ ಉದಾಹರಣೆಗಳೊಂದಿಗೆ ಬಿಂಬಿಸಿದರು.

ಅಧ್ಯಕ್ಷತೆ ವಹಿಸಿದ್ದ ಗೌರವ ಕೋಶಾಧಿಕಾರಿ ಪ್ರೊ. ಚಂದ್ರಶೇಖರ ನಾದೂರು ಅವರು ಮತ್ತೊಮ್ಮೆ ಉಪನ್ಯಾಸಕರ ಪರಿಚಯ ಮಾಡಿ ಅವರ ಸಾಧನೆಯ ಪಕ್ಷಿನೋಟವನ್ನು ನೀಡಿ, ಅವರು ನಾ.ಕಸ್ತೂರಿಯವರ ಸಾಹಿತ್ಯದ ಸವಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎನ್ನುತ್ತಾ, ನೆರೆದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

## ದಿನಾಂಕ ೧೨/೧೦/೨೦೨೫ ರ ಭಾನುವಾರ ಬೆಳಗ್ಗೆ ಶ್ರೀ ಕೆ. ಮೋಹನದೇವ್ ಆಳ್ವ ಮತ್ತು ಡಾ ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ 'ಶ್ರೀ ಕೆ.ವಿ. ಶಂಕರಗೌಡ ಪ್ರಶಸ್ತಿ'ಯನ್ನು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ರಂಗಕರ್ಮಿ ಶ್ರೀ ಕೆ.ವಿ. ನಾಗರಾಜಮೂರ್ತಿ ಅವರಿಗೆ ಪ್ರದಾನ ಮಾಡಲಾಯಿತು

ಮುಖ್ಯ ಅತಿಥಿಗಳಾಗಿ ಸಿನಿಮಾ ನಿರ್ದೇಶಕರು ಮತ್ತು ರಂಗಭೂಮಿ ಕಲಾವಿದರಾದ ಶ್ರೀ ರಾಣಾ ಸುನೀಲ್‌ಕುಮಾರ್ ಸಿಂಗ್ ಆಗಮಿಸಿದ್ದರು.

ಕಾರ್ಯಕ್ರಮವು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀಮತಿ ಭಾಗ್ಯ ಅವರ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ಎಲ್ಲರನ್ನೂ ಆತ್ಮೀಯವಾಗಿ ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಹಾಗೇ ಇಂದಿನ ಮುಖ್ಯ ಅತಿಥಿಗಳಾಗಿ ಬರಬೇಕೆಂದು ಶ್ರೀ ರಾಣಾ ಸುನೀಲ್ ಕುಮಾರ್ ಸಿಂಗ್ ಅವರನ್ನು ಕೇಳಿಕೊಂಡದ್ದಕ್ಕೆ ಒಪ್ಪಿ ಆಗಮಿಸಿದ್ದಾರೆ, ಅವರಿಗೂ ವಿಶೇಷವಾದ ಸ್ವಾಗತ ಕೋರುತ್ತೇನೆ ಎಂದರು.

ನಂತರ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ರಂಗಕರ್ಮಿ ಶ್ರೀ ಕೆ.ವಿ. ನಾಗರಾಜಮೂರ್ತಿ ಅವರಿಗೆ 'ಶ್ರೀ ಕೆ.ವಿ. ಶಂಕರಗೌಡ ಪ್ರಶಸ್ತಿ'ಯನ್ನು ಮುಖ್ಯ ಅತಿಥಿಗಳು ಪ್ರದಾನ ಮಾಡಿದರು. ವೇದಿಕೆಯ ಮೇಲಿದ್ದ ಗಣ್ಯರು ಕೈ ಜೋಡಿಸಿದರು.

ದತ್ತಿ ದಾನಿಗಳಲ್ಲಿ ಒಬ್ಬರಾದ ಶ್ರೀ ಕೆ.ಮೋಹನ್ ದೇವ್ ಆಳ್ವ ಅವರು ಮಾತನಾಡುತ್ತಾ, ತಾವು ಯಾವ ಕಾರಣಕ್ಕಾಗಿ 'ಶ್ರೀ ಕೆ.ವಿ. ಶಂಕರಗೌಡ ಪ್ರಶಸ್ತಿ'ಯನ್ನು ಸ್ಥಾಪನೆ ಮಾಡಿರುವೆ ಎಂದು ತಿಳಿಸುತ್ತಾ, ಅಂದಿನ ಕರ್ನಾಟಕ ಸರಕಾರದ ಮಂತ್ರಿಗಳಾಗಿದ್ದ ಶ್ರೀ ಕೆ.ವಿ. ಶಂಕರಗೌಡ ಅವರ ಗುಣಗಾನ ಮಾಡಿ ಅವರ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟರು.

ನಂತರ ಮುಖ್ಯ ಅತಿಥಿಗಳು ಹಾಗೂ ಪ್ರಶಸ್ತಿ ಪ್ರದಾನ ಮಾಡಿದ ಶ್ರೀ ರಾಣಾ ಸುನೀಲ್‌ಕುಮಾರ್ ಸಿಂಗ್ ಅವರು ಮಾತನಾಡಿದರು. ಈ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯನಾದ ನನಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಬಗ್ಗೆ ಅಪಾರವಾದ ಗೌರವವಿದ್ದು, ಹೊರಗಿನಿಂದಲೇ ಈ ಭವನವನ್ನು ನೋಡುತ್ತಾ ಇದ್ದ ನಾನು, ಇಂದು ಈ ವೇದಿಕೆಯಲ್ಲಿ ನಿಂತು ಮಾತನಾಡುತ್ತಾ ಇದ್ದೇನೆ ಎಂದರೆ ಅದು ಖಂಡಿತ ಬಿ.ಎಂ.ಶ್ರೀ.ಯವರ ಆಶೀರ್ವಾದ ಮತ್ತು ಬಯಕೆ ಎಂದು ಭಾವಿಸುತ್ತೇನೆ. ಅನೇಕ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತಿರುವ ಈ ಸಂಸ್ಥೆ, ಮೋಹನ್ ದೇವ್ ಆಳ್ವ ಅವರ ಪ್ರೋತ್ಸಾಹದಿಂದ ರಂಗಭೂಮಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಶ್ರೀ ಕೆ.ವಿ. ನಾಗರಾಜಮೂರ್ತಿ ಅವರಿಗೆ ಪ್ರಶಸ್ತಿ ನೀಡುತ್ತಿರುವುದು ಪ್ರಶಂಸನೀಯ. ಎಲ್ಲಾ ತರಬೇತಿ ಶಿಬಿರಗಳಲ್ಲಿ, ಹೀಗೆ ರಂಗಭೂಮಿಯ ಎಲ್ಲಾ ಪಸರಗಳಲ್ಲಿ ಗುರುತಿಸಿಕೊಂಡು, ತಮ್ಮನ್ನು ತಾವೇ ತೊಡಗಿಸಿಕೊಂಡ ಉತ್ಸಾಹಿ ಕಲಾವಿದರು ಇವರು. ಇಂತಹ ಅದ್ಭುತ ಕಲಾವಿದನಿಗೆ ನನ್ನ ಹಸ್ತಗಳ ಮೂಲಕ ಪ್ರಶಸ್ತಿ ಪ್ರದಾನ ಮಾಡಿರುವ ಕ್ಷಣ ಅವಿಸ್ಮರಣೀಯ ಎಂದರು.



ಪ್ರಶಸ್ತಿ ಸ್ವೀಕರಿಸಿದ ಶ್ರೀ ಕೆ.ವಿ. ನಾಗರಾಜಮೂರ್ತಿ ಅವರು

ಮಾತನಾಡುತ್ತಾ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಮೋಘ ಕಾರ್ಯಗಳನ್ನು ಅಭಿನಂದಿಸುತ್ತಾ, ಸರಕಾರ ಅಷ್ಟೇನೂ ಸಹಾಯಧನ ನೀಡದಿದ್ದರೂ, ಧೃತಿಗೆಡದೆ ಉತ್ತಮ ಕಾರ್ಯ ನಿರ್ವಹಿಸುತ್ತಿದೆ. ಅದರಲ್ಲೂ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡರ ಕಾರ್ಯಕ್ಷಮತೆ ಮೆಚ್ಚುವಂತಹದ್ದು. ಯಾವುದೇ ವಿಷಯವಿರಲಿ, ಅದರ ಬಗೆಗೆ ನಿರರ್ಗಳವಾಗಿ ಭಾಷಣ ಮಾಡುವ ಕೆಲವೇ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಇಂತಹ ಸಂದರ್ಭದಲ್ಲಿ ನಾನು ಈ ಪ್ರಶಸ್ತಿ ಪಡೆಯುತ್ತಿರುವುದು ನನಗೆ ಸಂತೋಷದ ವಿಷಯ ಎಂದರು. ಹಾಗೇ ರಂಗಭೂಮಿಯನ್ನು ಗುರುತಿಸಿ ಇಂತಹ ಪ್ರಶಸ್ತಿ ಸ್ಥಾಪಿಸಿದ ಶ್ರೀ ಮೋಹನ್ ದೇವ್ ಆಳ್ವ ಅವರು ಮಹಾನ್ ವ್ಯಕ್ತಿ ಎಂದರು.

ಅಧ್ಯಕ್ಷರಾಗಿ ಡಾ. ಬೈರಮಂಗಲ ರಾಮೇಗೌಡ ಅವರು ಪ್ರಶಸ್ತಿ ಪುರಸ್ಕೃತ ಶ್ರೀ ಕೆ.ವಿ. ನಾಗರಾಜಮೂರ್ತಿ ಅವರ ಬಗೆಗೆ ಮಾತನಾಡುತ್ತಾ, ಸಮಾಜದ ಯಾವುದೇ ಕ್ಷೇತ್ರದ ಕಲಾವಿದರೊಂದಿಗೆ ಮತ್ತು ಕಾರ್ಯಕರ್ತರೊಂದಿಗೆ ನಗುಮುಖದೊಂದಿಗೆ ಸಂಪರ್ಕ ಇಟ್ಟುಕೊಂಡು, ಅವರವರ ಕ್ಷೇತ್ರದಲ್ಲಿ ಗುರುತಿಸಿ ಮನ್ನಣೆ ನೀಡಲು ಉತ್ಸುಕರಾಗಿರುವ ಅಪರೂಪದ ವ್ಯಕ್ತಿ. ಅವರೊಡನೆ ಸಂವಾದ ಮಾಡಿದವರಿಗೆ, ಅವರ ಆಳವಾದ ಅನುಭವದ ಹಾಗೂ ಅವರು ಅದನ್ನು ಪ್ರಕಟಿಸುವ ರೀತಿಯ ಪರಿಚಯವಾಗುತ್ತದೆ. ಅವರು ಕೇವಲ ರಂಗಕರ್ಮಿ ಅಷ್ಟೇ ಅಲ್ಲ, ಅವರೊಬ್ಬ ಧೀಮಂತ ರಂಗತಜ್ಞ, ಪ್ರಶಸ್ತಿ ಸ್ವೀಕರಿಸುವುದರ ಜೊತೆಗೆ, ಆ ಪ್ರಶಸ್ತಿಯನ್ನು ಯಾರು ನೀಡಿದರು ಮತ್ತು ಯಾವ ಕಾರಣಕ್ಕಾಗಿ ನೀಡಿರಬಹುದು ಎಂದು ಗ್ರಹಿಸುವ ಮನೋಧರ್ಮ ಶ್ರೀ ಕೆ.ವಿ. ನಾಗರಾಜಮೂರ್ತಿ ಅವರಲ್ಲಿದೆ. ಅವರೊಬ್ಬ ವರ್ಣರಂಜಿತ ವ್ಯಕ್ತಿ. ಇಂತಹವರಿಗೆ ಗೌರವಿಸುವ ಸುಯೋಗ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ದಾನಿಗಳಾದ ಶ್ರೀ ಮೋಹನ್ ದೇವ್ ಆಳ್ವ ಅವರ ಮೂಲಕ ದೊರೆತಿದೆ. ಯಾರೇ ಸಹಾಯ ಹಸ್ತ ನೀಡಲಿ ಬಿಡಲಿ, ನಮ್ಮ ರಂಗಚಟುವಟಿಕೆ ನಿರಂತರವಾಗಿ ನಡೆಯಲಿ ಎನ್ನುವ ಮತ್ತು ನಡೆಸುವ ಛಲವಾದಿ ಶ್ರೀ ಕೆ.ವಿ.ನಾಗರಾಜಮೂರ್ತಿ. ಈ ಪ್ರಶಸ್ತಿಯ ಹೆಸರಿನಲ್ಲಿರುವ ವ್ಯಕ್ತಿ ಶ್ರೀ ಶಂಕರಗೌಡರ ಬಗೆಗೆ, ಶ್ರೀ ಮೋಹನ್ ದೇವ್ ಆಳ್ವ ಅವರು ಆಡಿದ ಮಾತುಗಳನ್ನು ಸಮರ್ಥಿಸಿಕೊಳ್ಳುತ್ತಾ, ಇಂದು ಅವರಂತಹ ವ್ಯಕ್ತಿಗಳು ಇಲ್ಲದಿರುವುದು ಮನಸ್ಸಿಗೆ ಬೇಸರವನ್ನು ಉಂಟುಮಾಡುತ್ತದೆ ಎನ್ನುತ್ತಾ ತಮ್ಮ ಮಾತುಗಳನ್ನು ಮುಗಿಸಿದರು.

ನಿರೂಪಣೆ ಕಾರ್ಯವನ್ನು ನಿರ್ವಹಿಸಿದ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿ ಪ್ರೊ.ಚಂದ್ರಶೇಖರ ನಾದೂರು ಅವರ ವಂದನಾರ್ಪಣೆಯೊಂದಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೧೪/೧೦/೨೦೨೫ ರ ಮಂಗಳವಾರ ಸಂಜೆ ಶ್ರೀ ಬೇಟೆರಾಯ ದೀಕ್ಷಿತರು, ಪ್ರೊ. ಬಿ. ರಾಮಸ್ವಾಮಿ, ಶ್ರೀಮತಿ ಎಚ್.ವಿ. ಸಾವಿತ್ರಮ್ಮ ರಾಮಸ್ವಾಮಿ ಮತ್ತು ಶ್ರೀಕಂಠಯ್ಯ ಸಂಯುಕ್ತ ದತ್ತಿ ಆಶ್ರಯದಲ್ಲಿ 'ಸಾಹಿತ್ಯ ಮತ್ತು ವೈದ್ಯಲೋಕ' ಎಂಬ ವಿಷಯದ ಮೇಲೆ ಡಾ. ಸಿ. ನಂದಿನಿ, ಸಾಹಿತಿಗಳು ಮತ್ತು ಪ್ರಾಧ್ಯಾಪಕರು, ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಅವರು ವಿಚಾರ ಮಂಡಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಸಭಿಕರನ್ನು ಸ್ವಾಗತಿಸಿ, ಇಂದಿನ ಉಪನ್ಯಾಸಕಿ ಡಾ. ಸಿ. ನಂದಿನಿ, ಸಾಹಿತಿಗಳು ಮತ್ತು ಪ್ರಾಧ್ಯಾಪಕರು, ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಅವರನ್ನು ಪರಿಚಯಿಸಿದರು.




ಡಾ. ನಂದಿನಿಯವರು ಉಪನ್ಯಾಸ ಪ್ರಾರಂಭಿಸುತ್ತಾ ಸಾಹಿತ್ಯ ಅಂದಕೂಡಲೆ ನಮಗೆ ನೆನಪಿಗೆ ಬರುವುದು ಕುವೆಂಪು, ದ.ರಾ. ಬೇಂದ್ರೆ ಮುಂತಾದವರು. ಆದರೆ ವೈದ್ಯಲೋಕದ ಸಾಹಿತಿಗಳ ನೆನಪು ತಟ್ಟಂತ ನೆನಪಿಗೆ ಬರುವುದಿಲ್ಲ. ಈ ದಿಸೆಯಲ್ಲಿ ನಾವು ನೆನಪಿಸಿಕೊಳ್ಳಬೇಕಾದವರು 'ತಟ್ಟಂತ ಹೇಳಿ' ಪ್ರಖ್ಯಾತಿಯ ನಾ.ಸೋಮೇಶ್ವರ ಅವರು. ಶ್ರೇಷ್ಠ ಮನೋವೈದ್ಯರೂ ಆದ ಅವರು ಅನೇಕ ವೈದ್ಯ ಕೃತಿಗಳನ್ನು ರಚಿಸಿದ್ದಾರೆ. ಸ್ವತಃ ವೈದ್ಯರಾಗಿದ್ದುಕೊಂಡು ಕೃತಿಗಳನ್ನು ರಚಿಸಿ ಲೋಕಾರ್ಪಣೆ ಮಾಡಿದವರು ಅನೇಕರಿದ್ದಾರೆ. ಇದರಲ್ಲಿ ವೈದ್ಯಕೀಯ ಕ್ಷೇತ್ರದ ಮಾಹಿತಿಗಳನ್ನು ನೀಡುವ ಸಾಹಿತ್ಯ ಇರಬಹುದು ಅಥವಾ ವೈದ್ಯಕೀಯೇತರ ಸಾಹಿತ್ಯವೂ ಇರಬಹುದು. ಭಾರತೀಯ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ನೋಡುವುದಾದರೆ ಧನ್ವಂತರಿ ಶುಶ್ರೂಷೆ ಮತ್ತು ಅದರ ವಿಭಿನ್ನ ಚಿಕಿತ್ಸಕಾ ವಿಧಾನಗಳು. ಇದರ ಮೇಲೆ ಸಾಹಿತ್ಯ ಭಂಡಾರವೇ ಲಭ್ಯವಿದೆ. ಇದರ ಜೊತೆಗೆ ವೈದ್ಯಕೀಯ ಚಿಕಿತ್ಸೆಯ ನಾನಾ ಪ್ರಕಾರಗಳ ಸಾಹಿತ್ಯವೂ ಇರುವುದುಂಟು. ಇದೊಂದು ವಿಶಾಲವಾದ ಕ್ಷೇತ್ರ. ಪ್ರಸೂತಿಯ ಸಮಯದಲ್ಲಿ ಒಬ್ಬ ಸ್ತ್ರೀ ಅನುಭವಿಸುವ ಸಂವೇದನೆ, ಕ್ಯಾನ್ಸರ್

ನಂತಹ ರೋಗಕ್ಕೆ ತುತ್ತಾದವರ ಬವಣೆ, ದೈಹಿಕ ಅಥವಾ ಮಾನಸಿಕ ರೋಗಗಳಿಂದ ನರಳುವವರಿಗೆ ಅದನ್ನು ಎದುರಿಸುವ ಬಗೆಗಿನ ಕಿವಿಮಾತು, ವೈದ್ಯಲೋಕದಲ್ಲಿ ಅನೇಕ ವೇಳೆ ಬರುವ ಹಾಸ್ಯ ಪ್ರಸಂಗಗಳು, ಅನುಭವಗಳು, ಇತ್ಯಾದಿ. ಹೀಗೆ ಡಾ. ನಂದಿನಿಯವರು ಈ ಕ್ಷೇತ್ರದ ಬೃಹತ್ ಸಾಹಿತ್ಯ ಲೋಕದ ಅವಲೋಕನವನ್ನು ಸಮರ್ಪಕವಾಗಿ ಮಂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡರು ಮಾತನಾಡುತ್ತಾ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಅನುಕೂಲವಾದ ಪಠ್ಯರೂಪದ ಸಾಹಿತ್ಯ ಒಂದುಕಡೆಯಾದರೆ, ಅನಾರೋಗ್ಯದಿಂದ ಬಳಲುತ್ತಿರುವ ರೋಗಿಗಳಿಗೆ ಮಾರ್ಗದರ್ಶನ ಮಾಡುವ, ಅವರಿಗೆ ಸಾಂತ್ವನ ಹೇಳುವ, ಚಿಕಿತ್ಸೆಯ ಸಮಯದಲ್ಲಿ ಅವರಿಗೆ ಧೈರ್ಯ ತುಂಬುವ ಹೀಗೆ ಬಹು ವಿಧವಾದ ಸಾಹಿತ್ಯ ಇರುವುದನ್ನು ಗಮನಕ್ಕೆ ತಂದರು.

ವೈದ್ಯಕೀಯ ಜಗತ್ತಿಗೂ ಸಾಹಿತ್ಯ ಲೋಕಕ್ಕೂ ಇರುವ ನಂಟನ್ನು ಡಾ. ನಂದಿನಿಯವರು ಬಹಳ ಆಳವಾಗಿ ಅಧ್ಯಯನ ಮಾಡಿ ಉಪನ್ಯಾಸ ನೀಡಿದ್ದಾರೆ. ಅವರಿಗೆ ಅಭಿನಂದನೆಗಳು ಎಂದರು.

ಕೊನೆಯಲ್ಲಿ ಸಭಿಕರು ಕೇಳಿದ ಕೆಲವು ಪ್ರಶ್ನೆಗಳಿಗೆ ಉಪನ್ಯಾಸಕರು ಸಮಂಜಸವಾಗಿ ಉತ್ತರ ನೀಡಿದರು.

ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೧೬/೧೦/೨೦೨೫ ಗುರುವಾರ ಸಂಜೆ ಶ್ರೀಮತಿ ಸುಶೀಲಾ ವಾಸುದೇವರಾವ್ ಹಳದೀಪುರ ವಾಸುದೇವರಾವ್ ದತ್ತಿ ಕಾರ್ಯಕ್ರಮದಲ್ಲಿ ಸಾಹಿತಿಗಳು ಮತ್ತು ಚಲನಚಿತ್ರ ಗೀತರಚನೆಕಾರರು ಆದ ಶ್ರೀ ಜಯಂತ್ ಕಾಯ್ಕಿಣಿ ಅವರು 'ಕಥನದ ಪ್ರೇರಣೆಗಳು' ವಿಷಯದ ಮೇಲೆ ಬೆಳಕನ್ನು ಚೆಲ್ಲಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು.




ಬಿ.ಎಂ.ಶ್ರೀ.ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರಿಂದ ದತ್ತಿಯ ಪರಿಚಯವಾಯಿತು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ಎಲ್ಲರನ್ನೂ ಆತ್ಮೀಯವಾಗಿ ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಹಾಗೇ ಇಂದಿನ ಉಪನ್ಯಾಸಕರಾಗಿ ಆಗಮಿಸಿರುವ ಶ್ರೀ ಜಯಂತ್ ಕಾಯ್ಕಿಣಿ ಅವರ ಪರಿಚಯ ಮಾಡಿಕೊಟ್ಟರು. ನಂತರ ಉಪನ್ಯಾಸ ಪ್ರಾರಂಭವಾಯಿತು.

ಶ್ರೀ ಜಯಂತ್ ಕಾಯ್ಕಿಣಿಯವರು ಉಪನ್ಯಾಸದ ಪ್ರಾರಂಭದಲ್ಲಿ ಕಥೆ ಮತ್ತು ಕಥನಕ್ಕೆ ಇರುವ ವ್ಯತ್ಯಾಸವನ್ನು ವಿವರಿಸಿದರು. ಸಾಮಾನ್ಯವಾಗಿ ಕಥೆ ಮುಗಿದುಹೋದ ಅಧ್ಯಾಯದ ಪರಿಚಯ ಮಾಡಿಕೊಡುತ್ತದೆ. ಆದರೆ ಕಥನಕ್ಕೆ ಒಂದು ಚಾಲನೆ ಇದೆ. ಕಥನವನ್ನು ಬರೆಯುವಾಗ ನಾವು ಅದರೊಡನೆ ಸಮ್ಮಿಲನವಾಗಿ ಬರೆಯುವ ಸನ್ನಿವೇಶ, ಬದುಕಿನ ಒಂದು ಅನಿರ್ವಚನೀಯ ಸಂಗತಿಗೆ ಹೊಂದುಕೊಂಡದ್ದು. ಕಥೆ ಒಂದೇ ಆದರೂ ಅದನ್ನು ಅಭಿವ್ಯಕ್ತಿಪಡಿಸುವ ವಿಧಾನಗಳೇ ಬೇರೆ ಬೇರೆ. ಈ ಅಭಿವ್ಯಕ್ತಿ ಕಥನ ರೂಪದಲ್ಲಿ ಹರಿದು ಬರುತ್ತದೆ ಎನ್ನುತ್ತಾ ದ.ರಾ.ಬೇಂದ್ರೆಯವರು ಬರೆದ ಒಂದು ಕಥೆ, ಹಲವಾರು ವರ್ಷಗಳ ಹಿಂದೆ ಒಂದು ಮಗು ಮಳೆಯಾದ ನಂತರ ನಿಂತ ನೀರಿನಲ್ಲಿ ಪ್ರತಿಬಿಂಬಿತವಾದ ಚಂದಿರನೊಡನೆ ಆಡುವ ದೃಶ್ಯದ ಪರಿಕಲ್ಪನೆ, ಹೀಗೆ ಹಲವಾರು ಉದಾಹರಣೆಗಳನ್ನು ಕೊಟ್ಟು ಕಥನಕ್ಕೆ ಹೇಗೆ ಪ್ರೇರಣೆ ಸಿಗುತ್ತದೆ ಎಂಬ ಅಂಶವನ್ನು ಸಭಿಕರಿಗೆ ಪ್ರೇರಣೆ ಉಂಟಾಗುವಂತೆ ನುಡಿದರು. ಕಥನವನ್ನು ಬಿಂಬಿಸುವಾಗ ಅದರಲ್ಲಿರುವ ಸತ್ಯ ಮತ್ತು ಸತ್ವವನ್ನು ಹೊರತರಬೇಕು. ಈ ಕಾರಣಕ್ಕಾಗಿಯೇ ನಟಸಾರ್ವಭೌಮ ಡಾ. ರಾಜಕುಮಾರ್ ಜನಪ್ರಿಯರಾಗಿದ್ದು. ಅಷ್ಟೇ ಅಲ್ಲ, ಕಥನದ ಸನ್ನಿವೇಶವನ್ನು ದೃಶ್ಯ ರೂಪದಲ್ಲಿ ತರಬೇಕಾದರೂ ಅದಕ್ಕೆ ಸೂಕ್ತ ಸ್ಥಳವಿರಬೇಕು. ಮೌನಕ್ಕೆ ಒಂದು ಜಾಗ, ಮಾತಿಗೆ ಒಂದು ಜಾಗ, ಪ್ರೇಮಸಲ್ಲಾಪಕ್ಕೆ ಒಂದು ಜಾಗ. ಹೀಗೆ ಮಾಡಿದಾಗ ಆ ಕಥನಕ್ಕೆ ಶೋಭೆ ಉಂಟಾಗುತ್ತದೆ ಎಂದು ವರ್ಣಿಸಿದರು. ಒಟ್ಟಿನಲ್ಲಿ ಒಂದು ಕಥೆಯ ಪದಬಳಕೆ, ಶೈಲಿ, ನಿರೂಪಣೆ ಹೇಗಿರಬೇಕೆಂದರೆ ಅವುಗಳ ಮೂಲಕ ಕಥೆ ಮಾತನಾಡುತ್ತಿರಬೇಕು. ಹೀಗಾಗಬೇಕಾದರೆ ಕಥೆಗಾರನಿಗೆ ಆದ ಪ್ರೇರಣೆ ಮುಖ್ಯ ಎನ್ನುತ್ತಾ ತಮ್ಮ ಉಪನ್ಯಾಸವನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷೀಯ ಭಾಷಣ ಮಾತನಾಡುತ್ತಾ ಡಾ. ಆರ್. ಲಕ್ಷ್ಮೀನಾರಾಯಣ ಅವರು ಉತ್ತಮ ಉಪನ್ಯಾಸ ನೀಡಿದ ಶ್ರೀ ಜಯಂತ್ ಕಾಯ್ಕಿಣಿ ಅವರನ್ನು ಅಭಿನಂದಿಸಿದರು. ಅವರ ಉಪನ್ಯಾಸವೇ ಪ್ರೇರಣಾದಾಯಕವಾಗಿತ್ತು. ಪ್ರೇರಣೆ ಎನ್ನುವುದು ಕೇವಲ ಕಥನಕ್ಕೆ ಸೀಮಿತವಾದದ್ದಲ್ಲ. ಯಾವುದೇ ಸಾಹಿತ್ಯ, ಅದು ಕವನವಾಗಿರಬಹುದು, ನಾಟಕವಾಗಿರಬಹುದು ಅಥವಾ ಯಾವುದೇ ಇನ್ನಾವುದೇ ಇರಬಹುದು, ಅದರ ಹಿಂದೆ ಒಂದು ಪ್ರೇರಣೆ ಇರುತ್ತದೆ ಎಂದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ ನಾದೂರು ಅವರ ವಂದನಾರ್ಪಣೆಯೊಂದಿಗೆ ಉಪನ್ಯಾಸ ಕಾರ್ಯಕ್ರಮ ಮುಕ್ತವಾಯಿತು.

## ದಿನಾಂಕ ೨೬/೧೦/೨೦೨೫ ರ ಭಾನುವಾರ ಬೆಳಿಗ್ಗೆ ೧೦.೩೦ ಗಂಟೆಗೆ "ಶಾ. ಬಾಲುರಾವ್ ಅನುವಾದ ಪ್ರಶಸ್ತಿ" ಮತ್ತು "ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ" ಪ್ರದಾನ ಕಾರ್ಯಕ್ರಮ ನಡೆಯಿತು.

ಪ್ರೊ. ವಿ. ಕೃಷ್ಣಮೂರ್ತಿ ರಾವ್, ನಿವೃತ್ತ ಪ್ರಾಂಶುಪಾಲರು, ಸರಕಾರೀ ಕಲೆ ಮತ್ತು ವಿಜ್ಞಾನ ಕಾಲೇಜ್, ಡಾಮನ್ ಇವರು ಪ್ರಶಸ್ತಿ ಪ್ರದಾನ ಮಾಡಿದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾದ ಡಾ. ಬಸವರಾಜ ಕಲ್ಗುಡಿ ಅವರು ಆಗಮಿಸಿದ್ದರು. ಅನುವಾದಕರು ಹಾಗೂ ರಂಗಕರ್ಮಿ ಶ್ರೀ ನಟರಾಜ್ ಹೊನ್ನವಳ್ಳಿ ಅವರು 'ಅನುವಾದ ಪ್ರಶಸ್ತಿ' ಮತ್ತು ಕನ್ನಡ ಭಾಷಾ ಉಪನ್ಯಾಸಕರಾದ ಶ್ರೀ ಆರ್. ದಿಲೀಪ್ ಕುಮಾರ್ ಅವರು 'ಯುವ ಬರಹಗಾರ ಪ್ರಶಸ್ತಿ' ಪಡೆದರು. ವೇದಿಕೆಯ ಮೇಲೆ ಶ್ರೀಮತಿ ಕಮಲಿನಿ ಶಾ. ಬಾಲುರಾವ್ ಮತ್ತು ಡಾ. ಆರ್. ಲಕ್ಷ್ಮೀನಾರಾಯಣ ಅವರು ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ. ಬೈರಮಂಗಲ ರಾಮೇಗೌಡ ಅವರು ವಹಿಸಿದ್ದರು.

ದಿ. ಶಾ. ಬಾಲುರಾವ್ ಅವರ ಭಾವಚಿತ್ರಕ್ಕೆ ಭಾವಪೂರ್ಣ ಪುಷ್ಪನಮನ ಸಲ್ಲಿಸುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಸ್ವಾಗತ ಗೀತೆ ಮತ್ತು ಬಿ.ಎಂ.ಶ್ರೀ. ರಚಿಸಿದ 'ಕರುಣಾಳು ಬಾ ಬೆಳಕೆ' ಗೀತೆಯನ್ನು ಹಾಡಲಾಯಿತು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ದತ್ತಿಯ ಅನುಷ್ಠಾನ, ಅದು ಇಲ್ಲಿಯವರೆಗೆ ಅನೂಚಾನವಾಗಿ ಬೆಳೆದುಬಂದ ವಿವರಗಳನ್ನು ಸಭಿಕರ ಮುಂದೆ ಮಂಡಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ಎಲ್ಲರನ್ನೂ ಆತ್ಮೀಯವಾಗಿ ಕಾರ್ಯಕ್ರಮಕ್ಕೆ ಸ್ವಾಗತಿಸಿ, ವೇದಿಕೆಯ ಮೇಲಿದ್ದ ಗಣ್ಯರನ್ನು ಪರಿಚಯಿಸಿದರು.

ನಂತರ ಪ್ರಶಸ್ತಿ ವಿಜೇತರಾದ ಈರ್ವರಿಗೂ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ವೇದಿಕೆಯ ಮೇಲಿದ್ದ ಗಣ್ಯರೆಲ್ಲ ಶುಭ ಹಾರೈಸಿ, ಹೂಗುಚ್ಛ ನೀಡಿ, ಶಾಲು ಹೊದಿಸಿದರು. ಪ್ರಶಸ್ತಿ ಪತ್ರ, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿಯ ಮೊತ್ತವನ್ನು ನೀಡಲಾಯಿತು.

ಮುಖ್ಯ ಅತಿಥಿಗಳಾದ ಡಾ. ಬಸವರಾಜ ಕಲ್ಗುಡಿ ಅವರು ಮಾತನಾಡುತ್ತಾ ಪ್ರಶಸ್ತಿಗಳನ್ನು ಪಡೆದ ಅನುವಾದಕರು ಹಾಗೂ ರಂಗಕರ್ಮಿ ಶ್ರೀ ನಟರಾಜ್ ಹೊನ್ನವಳ್ಳಿ ಮತ್ತು ಕನ್ನಡ ಭಾಷಾ ಉಪನ್ಯಾಸಕರಾದ ಶ್ರೀ ಆರ್. ದಿಲೀಪ್ ಕುಮಾರ್ ಅವರನ್ನು ಅಭಿನಂದಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿ ಅನೇಕ ವರ್ಷಗಳ ಅನುಭವ ಅದರಲ್ಲೂ ಅನುವಾದ ಕ್ಷೇತ್ರದಲ್ಲಿ ಅತ್ಯಂತ ಆಳವಾದ ಆಸಕ್ತಿಯನ್ನು ಹೊಂದಿದ್ದ ದಿ. ಶಾ. ಬಾಲೂರಾವ್ ಅವರ ಬಗೆಗೆ ಶ್ಲಾಘನೆಯ ನುಡಿಗಳನ್ನು ಆಡಿದರು.

ನಂತರ ಮಾತನಾಡಿದ ಡಾ. ಆರ್. ಲಕ್ಷ್ಮೀನಾರಾಯಣ ಅವರು ದಿ. ಶಾ. ಬಾಲುರಾವ್ ಅವರ ಅನುವಾದ ಕ್ಷಮತೆ ಮತ್ತು ನೈಪುಣ್ಯತೆಯನ್ನು ಕೊಂಡಾಡಿದರು. ಜೊತೆಗೆ ಯುವ ಬರಹಗಾರ ಪ್ರಶಸ್ತಿ ಸ್ವೀಕರಿಸಿದ ದಿಲೀಪ್ ಕುಮಾರ್ ಅವರು ಸಣ್ಣ ವಯಸ್ಸಿನಲ್ಲೇ ಬರವಣಿಗೆಯಲ್ಲಿ ತೊಡಗಿಸಿಕೊಂಡು ಬೆಳಕಿಗೆ ಬಂದವರು. ಇಂತಹ ಬರಹಗಾರರು



ಮುಂಚೂಣಿಗೆ ಬರುತ್ತಿರುವುದು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಆಶಾದಾಯಕ ವಿಷಯ ಎಂದರು.

ನಂತರ ಮುಖ್ಯ ಅತಿಥಿಗಳಾದ ಪ್ರೊ. ವಿ. ಕೃಷ್ಣಮೂರ್ತಿ ರಾವ್ ಮಾತನಾಡಿ ಪ್ರಶಸ್ತಿ ಸ್ವೀಕರಿಸಿದ ಇಬ್ಬರನ್ನು ಅಭಿನಂದಿಸಿದರು. ನನ್ನನ್ನು ಪ್ರಶಸ್ತಿಗಳಿಗೆ ಆಯ್ಕೆಗಾರನನ್ನಾಗಿ ನೇಮಿಸಿ ಇಂದು ಸನ್ಮಾನಿಸಿದ ಡಾ. ಬೈರಮಂಗಲ ರಾಮೇಗೌಡರಿಗೆ ವಂದಿಸುತ್ತೇನೆ ಎಂದರು. ಇಂತಹ ಅಮೂಲ್ಯ ಪ್ರಶಸ್ತಿಗಳನ್ನು ಅರ್ಹರಾದ ವ್ಯಕ್ತಿಗಳಿಗೆ ನೀಡುತ್ತಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದ ಹೆಸರನ್ನು ಭವ್ಯಗೊಳಿಸುವುದರಲ್ಲಿ ಸಂಶಯವಿಲ್ಲ. ನನ್ನನ್ನು ಆಹ್ವಾನಿಸಿದ ನಿಮಗೆ ಧನ್ಯವಾದಗಳು ಎಂದರು.

ನಂತರ ಬಿ.ಎಂ.ಶ್ರೀ. ವಿರಚಿತ 'ವಸಂತ ಬಂದ ಋತುಗಳ ರಾಜ ತಾ ಬಂದ' ಗೀತೆಯನ್ನು ಹಾಡಲಾಯಿತು.

ಪ್ರಶಸ್ತಿ ಪುರಸ್ಕೃತರಾದ ಶ್ರೀ ನಟರಾಜ್ ಹೊನ್ನವಳ್ಳಿ ಮತ್ತು ಶ್ರೀ ಆರ್. ದಿಲೀಪ್ ಕುಮಾರ್ ಅವರು ಮಾತನಾಡಿ ತಮ್ಮ ಸಾಹಿತ್ಯಕ್ಕೆ ಮೆಚ್ಚಿ ಮನ್ನಣೆ ನೀಡಿ ಗೌರವಿಸಿದ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ವಂದಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರು ಮಾತನಾಡುತ್ತಾ ರಂಗಭೂಮಿಯನ್ನು ಸಮಾಜದ ಬದಲಾವಣೆಗೆ ಹೇಗೆ ಬಳಸಿಕೊಳ್ಳಬಹುದು ಅನ್ನುವುದು ಶ್ರೀ ನಟರಾಜ್ ಹೊನ್ನವಳ್ಳಿ ಅವರ ನಾಟಕಗಳಿಂದ ಅಭಿವ್ಯಕ್ತವಾಗುತ್ತದೆ. ತೀರ್ಪುಗಾರರಾದ ಬಸವರಾಜ ಕಲ್ಗುಡಿಯವರು "ಒಂದು ಸಂಸ್ಥೆ ಮಾಡುವ ಕೆಲಸವನ್ನು ಹೇಗೆ ಒಬ್ಬ ವ್ಯಕ್ತಿ ಮಾಡಬಲ್ಲ ಎಂಬುದನ್ನ ಪ್ರಶಸ್ತಿ ವಿಜೇತರು ತೋರಿಸಿಕೊಟ್ಟಿದ್ದಾರೆ" ಎಂದು ಹೇಳಿದ ಮಾತನ್ನು ಪುನರುಚ್ಚರಿಸಿದರು. ಇಂದಿನ ವಿಶೇಷತೆಯೆಂದರೆ, ಪ್ರಶಸ್ತಿ ವಿಜೇತರಿಬ್ಬರೂ ದಿ. ಶಾ. ಬಾಲುರಾವ್ ಅವರ ಕೃತಿಗಳನ್ನು ಓದಿದವರು ಮತ್ತು ಅವರಿಂದ ಸ್ಫೂರ್ತಿ ಪಡೆದವರು. ಶ್ರೀಮತಿ ಕಮಲಿನಿಯವರು ತಮ್ಮ ಪತಿಯ ಹೆಸರಿನಲ್ಲಿ ಇಟ್ಟಿರುವ ಈ ಪ್ರಶಸ್ತಿಗಳು ಪ್ರತಿ ವರ್ಷವೂ ದಿ. ಶಾ. ಬಾಲುರಾವ್ ಅವರು ನಡೆದು ಬಂದ ಹಾದಿಯ ಸಾರ್ಥಕತೆಯನ್ನು ಮೆರೆಯುವುದರೊಂದಿಗೆ, ಅವರಿಗೆ ಅತ್ಯಂತ ಪ್ರಿಯವಾದ ವಿಷಯಗಳಲ್ಲಿ ಉತ್ತೇಜನ ನೀಡುವಲ್ಲಿ ಸಂಪೂರ್ಣ ಯಶಸ್ವಿಯಾಗುತ್ತಿವೆ ಅಂದರು.

ಪ್ರೊ. ಚಂದ್ರಶೇಖರ ನಾದೂರು ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ: ೨೭.೧೦.೨೦೨೫ರಂದು ಸೋಮವಾರ ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ, ಕನ್ನಡ ವಿಭಾಗ, ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು, ಐಕ್ಯೂಎಸಿ, ಕುವೆಂಪು ವಿಶ್ವವಿದ್ಯಾಲಯ ಕನ್ನಡ ಅಧ್ಯಾಪಕರ ವೇದಿಕೆ ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನ (ರಿ) ಬೆಂಗಳೂರು ಈ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಾಟಕ ರಚನಾ ಕಮ್ಮಟ

ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗ ರಾಸೇಯೋ ಘಟಕಗಳು, ಐಕ್ಯೂಎಸಿ, ಕುವೆಂಪು ವಿಶ್ವವಿದ್ಯಾಲಯದ ಪದವಿ ಕನ್ನಡ ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನ(ರಿ) ಬೆಂಗಳೂರು ಈ ಸಂಸ್ಥೆಗಳ ಒಂದು ದಿನದ ರಾಜ್ಯ ಮಟ್ಟದ 'ನಾಟಕ ರಚನಾ ಕಮ್ಮಟ' ಉದ್ಘಾಟಿಸಿ ಮಾತಾಡಿದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ವಿದ್ಯಾರ್ಥಿಗಳ ಓದು ಮತ್ತು ಬರಹಗಳು ಕೃತಿ ಮೂಲಕ ಬರುವುದಾದರೆ ಅದು ನಾಟಕ ಸಾಹಿತ್ಯದಿಂದ ಮಾತ್ರ. ಈ ದೃಷ್ಟಿಯಲ್ಲಿ ಪಠ್ಯದ ಜೊತೆಗೆ ಪಠ್ಯೇತರವಾಗಿ ನಾಟಕವನ್ನು ರಂಗದಲ್ಲಿ ತೊಡಗಿಸಿಕೊಳ್ಳಬೇಕು. ಅದಕ್ಕೊಂದು ಉದಾಹರಣೆಯಾಗಿ ೯ ವರ್ಷದ ಬಾಲಕ ವಿನಮ್ರವಾಗಿ ಕೌನ್ ಬನೇಗಾ ಕರೋಡ್‌ಪತಿಯಲ್ಲಿ ಅಮಿತಾಬ್ ಬಚನ್ ಅವರಿಗೆ ಕೊಡುವ ಉತ್ತರ ನೋಡುಗರಿಗೆ ಸ್ಫೂರ್ತಿದಾಯಕವಾಗಿರಬೇಕು ಎಂಬ ವಿಚಾರಧಾರೆಗಳನ್ನು ಸ್ವಯಂಸೇವಕರು ಅಳವಡಿಸಿಕೊಳ್ಳಬೇಕೆಂದರು. ಈ ಮೂಲಕ ದೇಶ ಕಟ್ಟುವ ಕೆಲಸ ಮಾಡಬೇಕೆಂದು ಹೇಳುತ್ತಾ ದೇಶಸೇವೆಯಲ್ಲಿ ರಾಸೇಯೊ ಸೇವಕರ ಹಾಗೂ ನಮ್ಮೆಲ್ಲರ ಹೊಣೆ ಅದರ ಜವಾಬ್ದಾರಿ ಆಗಬೇಕೆಂದರು. ಪ್ರಾಸ್ತಾವಿಕವಾಗಿ ಮಾತಾಡಿದ ರಾಸೇಯೋ ಅಧಿಕಾರಿಗಳಾದ ಪ್ರೊ. ಹಾ.ಮ. ನಾಗಾರ್ಜುನ, ಬಿ.ಎಂ.ಶ್ರೀ.ಪ್ರತಿಷ್ಠಾನ ರಾಜ್ಯ, ಅಂತರರಾಜ್ಯ ಮಟ್ಟದಲ್ಲಿಯೂ ಸಂಕಿರಣ, ಕಮ್ಮಟಗಳಿಗೆ ಹಿರಿಯ ವಿದ್ವಾಂಸರನ್ನು ಕರೆತಂದು ಸಾವಿರಾರು ಕಾರ್ಯಕ್ರಮಗಳನ್ನು ನಡೆಸುತ್ತಿದ್ದು 'ಕಾವ್ಯೇಷು ನಾಟಕಂ ರಮ್ಯಂ' ಕಾವ್ಯಕ್ಕಿಂತ ನಾಟಕ ಮಿಗಿಲಾದುದು ಹಾಗು ಶ್ಲಾಘನೀಯವಾದುದು ಎಂಬ ಮಾತುಗಳನ್ನು ಸಾಂಕೇತಿಕವಾಗಿ ನುಡಿದರು .ಬಿ.ಎಂ.ಶ್ರೀ. ಪ್ರತಿಷ್ಠಾನದ ಸಹ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಹಾಗೂ ಪ್ರತಿಷ್ಠಾನದ ಕೋಶಾಧಿಕಾರಿಗಳಾದ ಡಾ.ಚಂದ್ರಶೇಖರ್ ನಾದೂರು, ಜನಪ್ರಿಯ ಸಿನಿಮಾ ನಿರ್ದೇಶಕರಾದ ಶ್ರೀ ರಾಣಾ ಸುನೀಲ್ ಕುಮಾರ್ ಸಿಂಗ್, ಕನ್ನಡ ಅಧ್ಯಾಪಕರ ವೇದಿಕೆ ಸಹ ಕಾರ್ಯದರ್ಶಿಗಳಾದ ಡಾ.ಹಾಲಮ್ಮ, ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರಾದ ಹಿರಿಯ ವಿದ್ಯಾರ್ಥಿ ಸ್ವಾನ್ ಕೃಷ್ಣಮೂರ್ತಿ, ರಾಸೇಯೋ ಘಟಕದ ಅರುಣಕುಮಾರ್ ಎನ್. ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯರಾದ ಪ್ರೊ. ರಾಜೇಶ್ವರಿ ಎನ್. ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆ ಅಡಿಯಲ್ಲಿ ನಾಟಕ ರಚನಾ ಕಮ್ಮಟವು ಅರ್ಥಪೂರ್ಣವಾಗಿ ಮೂಡಿಬರುವಲ್ಲಿ ನಿಮ್ಮಂತ ಸ್ವಯಂಸೇವಕರಿಂದ ಮಾತ್ರ ಸಾಧ್ಯ ಎಂಬುದನ್ನು ತಿಳಿಹೇಳಿದರು.

ಕಾಲೇಜಿನ ಕನ್ನಡ ವಿಭಾಗದ ಉಪನ್ಯಾಸಕರಾದ ಡಾ. ಶಿವ, ಡಾ. ರಾಜೀವ್, ಡಾ. ಪರಮೇಶ್, ಡಾ. ಲವ, ಡಾ. ಪುರಷೋತ್ತಮ ಡಾ. ಅಶೋಕ, ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರಾಸೇಯೋ ಘಟಕದ ನೂರಾ ಇಪ್ಪತ್ತು ಸ್ವಯಂಸೇವಕರು ಭಾಗವಹಿಸಿದ್ದರು. ಕು. ರಶ್ಮಿ ಎಸ್. ಪ್ರಾರ್ಥಿಸಿದರು, ಕು. ಸಿಂಧು, ಅಮಿತ್.ಎಸ್.ಎಂ. ಶಾಂಭವಿ, ಕಾರ್ತಿಕ್, ಷಣ್ಮುಖಿ.ಸಿ.ಗೌಡ, ಮಾರುತಿ.ಎಸ್., ಪರಿಣಿತ.ಎಚ್.ಎಂ, ನಿರ್ವಹಿಸಿ ನಿರೂಪಿಸಿದರು.













# ಬಿ.ಎಂ.ಶ್ರೀಕಂಠಯ್ಯ

## ೯. ಭಾಷಣ ಮೀಮಾಂಸೆ

ಡಾ. ರಾಮೇಗೌಡ (ರಾಗೌ)

ಮುಂದುವರೆದ ಭಾಗ...

ಶೈಲಿಯ ಲಕ್ಷಣಗಳನ್ನು ಗುರುತಿಸುತ್ತ 'ಶ್ರೀ' ಅವರು ಸ್ಪಷ್ಟತೆ, ಸತ್ವ ಮತ್ತು ಸೌಂದರ್ಯ ಎಂಬ ಮೂರು ಗುಣಗಳನ್ನು ಹೇಳುತ್ತಾರೆ; ಸತ್ವ ಮತ್ತು ಸೌಂದರ್ಯ ಕಾವ್ಯದಲ್ಲಿಯೂ ಗುಣಗಳಾಗಿವೆ, ಸ್ಪಷ್ಟತೆ ಕಾವ್ಯದಲ್ಲಿ ಅನಪೇಕ್ಷಿತ. ಸ್ಪಷ್ಟತೆ ಅರ್ಥಮಾಡಿಕೊಳ್ಳುವಿಕೆಯೆಂದೂ, ಸತ್ವವನ್ನು ಪ್ರಭಾವಿಸುವ ಗುಣವೆಂದೂ ಸೌಂದರ್ಯ ಸಂತೋಷ ಕಾಣುವ ಗುಣವೆಂದೂ ಅವರು ಸರಿಯಾಗಿಯೇ ಹೇಳಿದ್ದಾರೆ. ಓದುಗನ ಮನಸ್ಸಿಗೆ ಆಲೋಚನೆಯನ್ನು ದಾಟಿಸುವ ಲಕ್ಷಣಗಳೆಂದು ಅವರಿಲ್ಲಿ ಸ್ಪಷ್ಟಪಡಿಸಿದ್ದಾರೆ. 'ಸೌಂದರ್ಯ' ಸೌಂದರ್ಯಾನುಭವಕ್ಕೆ ಸಂಬಂಧಿಸಿದ್ದು, ಬರೆಹಗಾರನ ಕಲ್ಪನೆ ಮತ್ತು ಕಲಾತ್ಮಕ ನಿರ್ಣಯಕ್ಕೆ ಬರುವಂಥದೆಂಬ ಅವರ ಅಭಿಪ್ರಾಯ ಅಪೇಕ್ಷಣೀಯವಾದುದು. ಶೈಲಿಯ ಸ್ಪಷ್ಟತೆ ಎನ್ನುವುದು ಆಲೋಚನೆ, ರಚನೆ ಮತ್ತು ಅಭಿವ್ಯಕ್ತಿಯಲ್ಲಿ ಸಾಕಾರಗೊಳ್ಳುವಂಥದು, ವಿಷಯದಲ್ಲಿ ಅವನಿಗಿರುವ ಆಸಕ್ತಿಯನ್ನು ತೋರಿಸುವಂಥದು, ಲೇಖಕನ ಶಬ್ದಪಾರಮ್ಯಗುಣ, ನಿಷ್ಪತ್ತಿಜ್ಞಾನ ಮತ್ತು ಪದಚರಿತ್ರೆ ಬಗ್ಗೆ ಹಿಡಿತವನ್ನು ತೋರಿಸುವಂಥದು– ಈ ಅಭಿಪ್ರಾಯಗಳೆಲ್ಲ ಕಾವ್ಯಕ್ಕೂ ಭಾಷಣ ಕಲೆಗೂ ಏಕಪ್ರಕಾರವಾಗಿ ಹೊಂದಿಕೆಯಾಗುತ್ತವೆ. ಕಾವ್ಯಮೀಮಾಂಸೆಯ ಬಗೆಗೆ 'ಶ್ರೀ' ಅವರಿಗಿರುವ ಆಸಕ್ತಿ ಮತ್ತು ಸಾಮರ್ಥ್ಯವನ್ನು ಇವು ತೆರೆದಿಡುತ್ತವೆ. ಆಲೋಚನೆ, ರಚನೆ ಮತ್ತು ಅಭಿವ್ಯಕ್ತಿ ಕಾವ್ಯದಲ್ಲಿಯೂ ನಿರೀಕ್ಷಿಸಬಹುದಾದ ಲಕ್ಷಣಗಳೇ ಆದರೂ, ಅವನ್ನು ವಿರಳವಾಗಿ ತೋರಿಸಬೇಕೆಂಬ ಇಂಗಿತವನ್ನು 'ಶ್ರೀ' ಅವರು ವ್ಯಕ್ತಪಡಿಸುತ್ತಾರೆ; ಅದನ್ನು ಪ್ರತಿಮಾದಿ ಅಲಂಕಾರಿಕ ಸಾಮಗ್ರಿಯ ಮೂಲಕ ತೋರಿಸುವುದು ಭಾಷಣದಲ್ಲಿ ತಪ್ಪಲ್ಲ ಎನ್ನುವುದನ್ನು ಅವರು ಪ್ರತಿಪಾದಿಸುತ್ತಾರೆ. ಶೈಲಿಯ 'ಸೌಂದರ್ಯ'ದಲ್ಲಿ ಪದಗಳ ನಾದ ಮತ್ತು ಲಯವನ್ನು ಪ್ರಮಾಣಬದ್ಧವಾಗಿ ತರುವುದರ ಬಗ್ಗೆ ಅವರು ಆಸಕ್ತಿ ತಳೆಯುತ್ತಾರೆ. ಕಾವ್ಯದಲ್ಲಂತೂ ಅವು ಅನಿವಾರ್ಯ, ಏಕೆಂದರೆ ಇವನ್ನು ಬಿಟ್ಟರೆ ಕಾವ್ಯವೇ ಆಗುವುದಿಲ್ಲ. ಶೈಲಿಯ ವಿಶ್ಲೇಷಣೆಯನ್ನು ಪ್ರತ್ಯೇಕವಾಗಿ ತಂದಿದ್ದು, ವಿವಿಧ ಬಗೆಯಲ್ಲಿ ಅದನ್ನು ಚರ್ಚಿಸಲು ಮುಂದಾಗುವರು. ಮನುಷ್ಯನೇ ಒಂದು ಶೈಲಿ ಎಂಬ ಅಭಿಪ್ರಾಯದಿಂದ ಹಿಡಿದು, ಅದು ಆಲೋಚನೆಯ ದಿರಿಸು, ಮನಸ್ಸಿನ ಪ್ರತಿಮೆ, ಕೊನೆಗೆ 'image of man' ಎಂಬುದರವರೆಗೆ ವಿವಿಧ ವಿದ್ವಾಂಸರ ಅಭಿಪ್ರಾಯಗಳಿಂದ ಸಮರ್ಥಿಸಲು ಅವರು ಹೊರಡುತ್ತಾರೆ. ಒಂದು ರೀತಿಯಲ್ಲಿ ಶೈಲಿ ವಿಜ್ಞಾನವೇ ಇಲ್ಲಿ ಪ್ರತ್ಯಕ್ಷವಾಗುತ್ತದೆ. ಮುಂದುವರಿದು ಶೈಲಿಯಲ್ಲಿ ನಾಲ್ಕು ವಿಧಗಳನ್ನು ಹೆಸರಿಸಿ, ಅದನ್ನು ವೈಯಕ್ತಿಕ, ನೈತಿಕ, ಕಲಾತ್ಮಕ ಮತ್ತು ಚಾರಿತ್ರಿಕ ಎಂಬುದಾಗಿ ವಿಭಜಿಸಿಕೊಳ್ಳುತ್ತಾರೆ. ಶೈಲಿ ಹೇಳಿಕೇಳಿ ಲೇಖಕನ ವ್ಯಕ್ತಿತ್ವದಿಂದ ಬರುವುದರಿಂದ, ಅದನ್ನವರು ವೈಯಕ್ತಿಕ ಎಂದು ಕರೆದುಕೊಂಡಿದ್ದಾರೆ; ಇಬ್ಬರು ಲೇಖಕರು ಒಂದೇ ರೀತಿಯಲ್ಲಿ ಒಂದು ವಸ್ತುವನ್ನು ನೋಡುವುದಿಲ್ಲ ಮತ್ತು ಬರೆಯುವುದಿಲ್ಲ ಎಂಬ ನಮ್ಮೆಲ್ಲರ ಅಭಿಪ್ರಾಯವನ್ನೆ 'ಶ್ರೀ'ಯವರು ತಳೆಯುತ್ತಾರೆ. ನೈತಿಕ ಎನ್ನುವುದು ಲೇಖಕನ ಆಂತರಿಕ ಅಥವಾ ವ್ಯಕ್ತಿನಿಷ್ಠ ಎನ್ನುವುದರಿಂದ, ಇದನ್ನು 'ವೈಯಕ್ತಿಕ' ಲಕ್ಷಣಕ್ಕೇ ಸೇರಿಸಬಹುದಾಗಿತ್ತಲ್ಲ ಎಂದೆನಿಸುವುದು ಸಹಜ. ಲೇಖಕನಿಗಿರುವ ನೈತಿಕ ಗುಣಗಳಿಂದಾಗಿ, ಅವು ಅವನನ್ನು ಪ್ರಭಾವಿಸುವುದರಿಂದಾಗಿ ಹಾಗೆ ಕರೆದಿರುವುದಾಗಿ ಅವರು ಅದಕ್ಕೆ ಸ್ಪಷ್ಟನೆ ನೀಡುತ್ತಾರೆ. ಕಲಾತ್ಮಕ ಶೈಲಿಯನ್ನು ಎಚ್ಚರದಿಂದ ಬೆಳೆಸಿಕೊಳ್ಳಬೇಕೆಂದು, ಅದು ಭಾಷಣ ಕಲೆಯ ವಲಯವನ್ನೂ, ದೃಷ್ಟಿಕೋನವನ್ನೂ ಹೇಳುತ್ತದೆಂದು 'ಶ್ರೀ' ಅವರು ತಮ್ಮ ವಿಚಾರ ಪ್ರಣಾಳಿಕೆಯನ್ನೇ ಮುಂದಿಡುತ್ತಾರೆ. ಭಾಷೆಯಲ್ಲಿನ ಪರಿಣಾಮಕಾರಿ ಗುಣಕ್ಕೆ ಸಂಬಂಧಿಸಿದ್ದು ಇದು, ಇಲ್ಲದಿದ್ದರೆ ಒಣ ಆಲೋಚನೆಯಾಗುತ್ತದೆ ಎಂಬುದು ಅವರ ವಾದ. ಆಲೋಚನೆ ಹಾಗೆ ಶುಷ್ಕವಾಗದೆ, ಆಲೋಚನೆಯೇ ಶೈಲಿಯಾಗಬೇಕಾದರೆ, ಅದಕ್ಕೆ ಕಲಾತ್ಮಕ ಹೊದಿಕೆ ಅಗತ್ಯ ಎಂಬುದನ್ನು ಅವರ ಚರ್ಚೆ ಹೇಳುತ್ತದೆ. ಇದು ಭಾಷಣ ಕಲೆಯ ಗಡಿಯನ್ನು ಅತಿಕ್ರಮಿಸಿ ಕಾವ್ಯ ಸೀಮೆಯನ್ನು ಪ್ರವೇಶಿಸುತ್ತದೆ ಎಂಬುದನ್ನು ಯಾರೂ ಒಪ್ಪಬೇಕಾಗುತ್ತದೆ. ಈ ಮೂರು ಲಕ್ಷಣಗಳು ವೈಯಕ್ತಿಕ, ನೈತಿಕ ಮತ್ತು ಕಲಾತ್ಮಕ ಒಬ್ಬ ಒಳ್ಳೆಯ ಲೇಖಕನನ್ನು ಬೆಳೆಸುವಲ್ಲಿ ಪಾತ್ರವಹಿಸುತ್ತವೆ ಎಂಬುದರ ಕಡೆಗೆ 'ಶ್ರೀ'ಯವರಿಗೆ ಒಲವಿರುವಂತೆ ತೋರುತ್ತದೆ; ಭಾಷಣಕಾರನನ್ನು ಇವು ರೂಪಿಸುತ್ತವೆ ಎಂಬುದು ಇದರ ಒಳ ಇಂಗಿತವೇ ಆಗಿರುತ್ತದೆ. ಇನ್ನು 'ಚಾರಿತ್ರಿಕ' ಲೇಖಕ ಬರೆಯುವ ಇಡೀ ವಾತಾವರಣವನ್ನು ರೂಪಿಸುವ ಕೆಲಸಕ್ಕೆ ಸಂಬಂಧಿಸಿದ್ದು, ಭಾಷಣಕಾರನಿಗೂ ಇದು ಅನ್ವಯ ಎಂದರೆ ಲೇಖಕ ಅಥವಾ ಭಾಷಣಕಾರ ಸಮಕಾಲೀನವಾದುದನ್ನು ತನ್ನ ತೆಕ್ಕೆಗೆ ತಂದುಕೊಳ್ಳುತ್ತಿರುವಂತೆಯೇ, ಸಾಂಸ್ಕೃತಿಕ ಮತ್ತು ಸಾಮಾಜಿಕವಾದುದರ ಸ್ಪಂದನ ಅದರಲ್ಲಿರಬೇಕೆಂಬ ಮಾತು ಇದರಲ್ಲಿದೆ. ಸಮಕಾಲೀನತೆ ಎಂದರೆ ಇಲ್ಲಿ ಸಾರ್ವಕಾಲೀನತೆ ಎಂದೇ ಅರ್ಥ. ಲೇಖಕ ಅಥವಾ ಭಾಷಣಕಾರರ ಶಕ್ತಿಯಾಗಿ, ಸತ್ವವಾಗಿ ಈ ಗುಣ ಅವನಲ್ಲಿರಬೇಕೆಂದು 'ಶ್ರೀ'ಯವರು ವಾದಿಸುತ್ತಿರುವಂತೆ ತೋರುತ್ತದೆ. ಇಷ್ಟಾದರೂ 'Poetic Diction' ಕಾವ್ಯದಲ್ಲಿ ಅಥವಾ ಕವಿಯಲ್ಲಿ ತೀರ ಸಹಜವಾಗಿರುವಂತೆ, ಭಾಷಣಕಾರನಲ್ಲಿ ಇರಬೇಕೆ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಕವಿಯೇ ಭಾಷಣಕಾರನಾದರೆ ಆ ಮಾತು ಬೇರೆ; ಅಲ್ಲಿಯೂ ಮಾತು ಅಲಂಕಾರಿಕವಾಗುವ ಅಗತ್ಯವಿರುವುದಿಲ್ಲ. ಭಾಷಣಕಾರನಿಗೆ 'ಕಾವ್ಯಾತ್ಮಕ ಶೈಲಿ' ಇರಬೇಕಾದ್ದಿಲ್ಲ, ಇದ್ದರೆ ಅದು ವಿಚಾರದ ತಾರ್ಕಿಕ ಅಭಿವ್ಯಕ್ತಿಗೆ ವಿಮುಖವಾಗಿರಬಾರದು, ಅನಗತ್ಯವಾಗಿ ರಮ್ಯಗೊಳಿಸಬಾರದು. ಎಷ್ಟೋಸರ್ತಿ 'ಶ್ರೀ'ಯವರು ಭಾಷಣಕಲೆ ಮತ್ತು ಕಾವ್ಯಕಲೆ ನಡುವೆ ಗೆರೆ ಎಳೆಯಲು ಹೋದಂತಿಲ್ಲ. ಭಾಷಣ ಕಲೆಯಲ್ಲಿ 'ಛಂದಸ್ಸಿನ' ಸಂಬಂಧವಿಲ್ಲದಿದ್ದರೂ, ಅದರ ಪ್ರಸ್ತಾಪ ಕೂಡ ಇಲ್ಲಿದೆ; ಅವರಿಗಿರುವ ಕಾವ್ಯಮೀಮಾಂಸೆಯ ಆಸಕ್ತಿಯನ್ನೇ ಇಲ್ಲಿ ಮತ್ತೊಮ್ಮೆ ಕಾಣುತ್ತಿದ್ದೇವೆ.

ಕೃತಿಯ ಎರಡನೆಯ ಭಾಗ 'ಸಾಹಿತ್ಯಿಕರೂಪ'ವನ್ನು ಕುರಿತಿದ್ದು, ಇದು ಮುಖ್ಯವಾಗಿ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯಮೀಮಾಂಸೆಗೆ ಸಂಬಂಧಿಸಿದ್ದೇ ಹೊರತು, ಇದಕ್ಕೂ 'ಭಾಷಣ ಕಲೆ'ಗೂ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ. ಇದರಲ್ಲಿ ಸಾಹಿತ್ಯದ ಸ್ವರೂಪ,

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/-  Date of Publishing and Posting: 31-10-2025

ಆನಂದಾನುಭವದ ಉದ್ದೇಶ, ಸಾಹಿತ್ಯದ ವಸ್ತು ವಿಷಯ, ಸಾಹಿತ್ಯದ ವರ್ಗೀಕರಣ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯಗಳು ಬರುತ್ತವೆ; ಹಾಗೆಯೇ ಕಾವ್ಯದ ಸ್ವರೂಪ ಮತ್ತು ಉಗಮ, ಕಾವ್ಯದ ವಿಧಗಳು, ಕಾವ್ಯದ ವಿಶೇಷಗಳು, ಕಾವ್ಯದ ಉದ್ದೇಶ, ಕಾವ್ಯದ ವಸ್ತುವಿಷಯ, ಸಾಮುದಾಯಿಕ ಕಾವ್ಯ ವಿಚಾರ, ಭಾವಗೀತೆ, ಹಾಡು, ಪ್ರಗಾಥ, ಸಾನೆಟ್, ಶೋಕಗೀತೆ ಮೊದಲಾದವುಗಳ ಚರ್ಚೆಯಿದೆ; ಅದರಂತೆಯೇ ಕಥನಕಾವ್ಯ, ಲಾವಣಿ, ಮಹಾಕಾವ್ಯ, ಸಾಹಸ, ರಮ್ಯಕಥನ, ನಾಟಕೀಯ ಕಾವ್ಯ, ನಾಟಕದ ವಿಧಗಳು ವರ್ಣಿತವಾಗಿವೆ; ಕಿರಿಯ ಕಾವ್ಯ ಪ್ರಕಾರಗಳಾದ ನೀತಿ ಬೋಧಕ ಕಾವ್ಯ, ವಿಡಂಬನ ಕಾವ್ಯ, ಹಳ್ಳಿಗಾಡಿನ ಕಾವ್ಯ ಮತ್ತು ಅನ್ಯೋಕ್ತಿ ಕುರಿತಂತೆ ಸಂಕ್ಷಿಪ್ತ ಪ್ರಸ್ತಾಪವಿದೆ; ಇದಾವುದೂ ನೇರವಾಗಿ ಉದ್ದೇಶಿತ ಕೃತಿಯೊಡನೆ ಸಂಬಂಧ ಸಾಧಿಸುವುದಿಲ್ಲ.

ಇನ್ನು ಮೂರನೆಯ ಭಾಗ 'ಗದ್ಯದ ರೂಪಗಳು' ಎಂಬ ಶೀರ್ಷಿಕೆಯನ್ನು ಹೊತ್ತಿದ್ದು, ಇಂಗ್ಲಿಷ್ ಗದ್ಯದ ಇತಿಹಾಸ ಮತ್ತು ಸ್ವರೂಪವನ್ನು ಪ್ರಸ್ತಾಪಿಸಲು ಮೀಸಲಾಗಿದೆ. ಇದಂತೂ 'ಭಾಷಣಕಲೆ' ವಿಚಾರಕ್ಕೆ ಹೊರತಾಗಿ ಬಂದದ್ದು ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ್ದು. ಇದರಲ್ಲಿ ಇಂಗ್ಲಿಷ್ ಗದ್ಯದ ಬೆಳವಣಿಗೆಯನ್ನು ಕುರಿತು ಚರ್ಚಿಸುವುದಲ್ಲದೆ, ಕಾದಂಬರಿ, ಇತಿಹಾಸ, ಜೀವನಚರಿತ್ರೆ, ಪ್ರಬಂಧ, ಸಾಹಿತ್ಯ ವಿಮರ್ಶೆಯ ಅವಲೋಕನವಿದೆ. ಸಾಹಿತ್ಯದ ಗದ್ಯ ಪ್ರಕಾರಗಳ ಬಗ್ಗೆ (ಇಂಗ್ಲಿಷ್‌ಗೆ ಸಂಬಂಧಿಸಿದಂತೆ) ಒಂದು 'ವಿಮಾನವೀಕ್ಷಣೆ' ಮಾತ್ರ ಇಲ್ಲಿ ಸಾಧ್ಯವಾಗಿದೆ. ಮೊದಲು ಭಾಷಣಕಲೆಯನ್ನು ವಿವರವಾಗಿ ಪರಿಶೀಲಿಸಿದ 'ಶ್ರೀ' ಅವರು, ಆಮೇಲಿನ ಅಧ್ಯಾಯಗಳಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಿಗೆ (ಕಾವ್ಯ ಮತ್ತು ಗದ್ಯ) ಸಂಬಂಧಿಸಿದಂತೆ ತಮ್ಮ ಚರ್ಚೆಯನ್ನು ಗುರಿಯಾಗಿಸುತ್ತಾರೆ. ತಾವು ಪಾಠ ಹೇಳುತ್ತಿದ್ದ ಪಠ್ಯದಲ್ಲಿ ಈ ಎಲ್ಲ ಪಠ್ಯಗಳು ಇದ್ದ ಕಾರಣದಿಂದ, ಈ ಎಲ್ಲ ಬರೆವಣಿಗೆ ಅವರಿಂದ ಸಾಧ್ಯವಾಗಿರಬೇಕು.        (ಮುಂದುವರೆಯುವುದು)

## ಪ್ರಸ್ತುತ ತಿಂಗಳ ಅಂಗಳ

**೦೧.೧೧.೨೦೨೫ ಶನಿವಾರ ಬೆಳಗ್ಗೆ ೯.೦೦ ಗಂಟೆಗೆ**
ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ

**೦೪.೧೧.೨೦೨೫ ಮಂಗಳವಾರ ಸಂಜೆ ೫.೦೦ ಗಂಟೆಗೆ**
ವಿ. ರಾಣಿ ಗೋವಿಂದರಾಜು ಕನ್ನಡ ಪರ ಹೋರಾಟ ರತ್ನ ಬಹುಮಾನ ಪ್ರದಾನ ಕಾರ್ಯಕ್ರಮ
ಪ್ರಶಸ್ತಿ ಪುರಸ್ಕೃತರು: ರು.ಬಸಪ್ಪ
ಹಿರಿಯ ಪತ್ರಕರ್ತರು, ಕನ್ನಡ ಹೋರಾಟಗಾರರು

**೦೭.೧೧.೨೦೨೫ ಶುಕ್ರವಾರ ಸಂಜೆ ೫.೦೦ ಗಂಟೆಗೆ**
ಹಳಗನ್ನಡ ರಸಗ್ರಹಣ ತರಗತಿಗಳ ಉದ್ಘಾಟನೆ

**೧೮.೧೧.೨೦೨೫ ಮಂಗಳವಾರ ಸಂಜೆ ೫.೦೦ ಗಂಟೆಗೆ**
ಸರ್.ಸಿ.ವಿ. ರಾಮನ್ ವಿಜ್ಞಾನ ಉಪನ್ಯಾಸ
ವಿಷಯ: ಇಂದಿನ ಕಾಲಮಾನಕ್ಕೆ ಕೃತಕ ಬುದ್ಧಿಮತ್ತೆ
ವಿಚಾರ ಮಂಡನೆ: ಶ್ರೀ ಸುರೇಶ್ ಬಿ.ಎಂ., ಚಾರ್ಟರ್ಡ್ ಅಕೌಂಟೆಂಟ್

**೨೭.೧೧.೨೦೨೫ ಗುರುವಾರ ಸಂಜೆ ೫.೦೦ ಗಂಟೆಗೆ**
ತೀ.ನಂ.ಶ್ರೀ. ವಿಶೇಷ ಉಪನ್ಯಾಸ ಕಾರ್ಯಕ್ರಮ
ವಿಚಾರ ಮಂಡನೆ: ಎಚ್. ದಂಡಪ್ಪ
ನಿವೃತ್ತ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಹಾಗೂ ವಿಮರ್ಶಕರು
ವಿಷಯ: ತೀ.ನಂ.ಶ್ರೀ. ವಿಮರ್ಶಾ ಲೋಕ

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭